ದಿನಾಂಕ. 17-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟಿ ಸವಾಲು:** 1 ನೇ ಪ್ರತಿವಾದಿ ಪರ ಶ್ರೀ ಆರ್.ಎನ್.ಎಚ್. ವಕೀಲರಿಂದಃ

18. ದ್ವಿತಿಯ ಪಿ.ಯು.ಸಿ ತನಕ ಓದಿದ್ದೇನೆ. ಯಲ್ಲಾಪರದಲ್ಲಿ ನನಗೆ ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ರೂಂ ಮಾಡಿಸಿಕೊಟ್ಟು ಓದಿಸಿದ್ದಾರೆ ಎಂದರೆ ಸಾಕ್ಷಿ ನಾನು ಬೇರೆಯವರ ಮನೆಯಲ್ಲಿ ಇದ್ದು ಓದಿದ್ದು ಎಂದು ನುಡಿಯುತ್ತಾರೆ. ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ವಿದ್ಯಾಭ್ಯಾಸ ಮತ್ತು ಊಟದ ಖರ್ಚು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ವಿದ್ಯಾಭ್ಯಾಸದ ಖರ್ಚು ನೀಡಿರುತ್ತಾರೆ ಮಾತ್ರ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸಾಕ್ಷಿಯು 9 ನೇ ತರಗತಿ ಓದಿದ್ದಾನೆ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಮ್ಮ ನನ್ನ ತಾಯಿಯು ಮನೆ ಜವಾಬ್ದಾರಿಗೆ ಸಹಕಾರವಾಗಿ ನಿಂತರು ಎಂದರೆ ಸಾಕ್ಷಿಯು ದೊಡ್ಡವನಾದ ನಂತರ ನುಡಿಯುತ್ತಾರೆ. ತಂದೆ ತೀರಿಕೊಂಡಾಗ ಗಂಡು ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಜವಾಬ್ದಾರಿ ಬರುತ್ತದೆ ಎಂದರೆ ಸರಿ. ಆದ್ದರಿಂದ ನನ್ನ ತಮ್ಮನಿಗೆ ಸಣ್ಣ ವಯಸ್ಸಿನಲ್ಲಿ ಜವಾಬ್ದಾರಿ ಬಿದ್ದಿದೆ ಎಂದು ಎಂದರೆ ಸಾಕ್ಷಿ ತಾಯಿ ಜೊತೆ ಜವಾಬ್ದಾರಿ ಬಿತ್ತು ಎಂದು ನುಡಿಯುತ್ತಾರೆ. ಆದ್ದರಿಂದ ನನ್ನ ತಮ್ಮನಿಗೆ ಹೊರಗಡೆ ಹೋಗಿ ವಿದ್ಯಾಭ್ಯಾಸ ಮಾಡಲು ತೊಂದರೆಯಾಯಿತು ಎಂದರೆ ಸಾಕ್ಷಿ ವಿದ್ಯಾಭ್ಯಾಸ ಮಾಡಲಿಕ್ಕೆ ಆಗುತ್ತಿತ್ತು ಎಂದು ನುಡಿಯುತ್ತಾರೆ.

19. ಕೊಡ್ಲಗದ್ದೆಯಿಂದ ಗುಳ್ಳಾಪುರಕ್ಕೆ 12 ಕಿ.ಮೀ ದೂರ ಇದೆ ಎಂದರೆ ಸಾಕ್ಷಿ 10 ಕಿ.ಮೀ ದೂರ ಇದೆ ಎಂದು ನುಡಿಯುತ್ತಾರೆ. ಕೊಡ್ಲಗದ್ದೆಯಲ್ಲಿ ಯಾವುದೇ ಪ್ರೌಢಶಾಲೆ ಇಲ್ಲ ಎಂದರೆ ಸರಿ. 20 ವರ್ಷಗಳ ಹಿಂದೆ ಯಾವುದೇ ಟೆಂಪೊ ಮತ್ತು ಬಸ್ಸು ವ್ಯವಸ್ಥೆ ಇರಲಿಲ್ಲ ಎಂದರೆ ಸಾಕ್ಷಿ ಬಸ್ಸು ವ್ಯವಸ್ಥೆ ಇತ್ತು ಎಂದು

ನುಡಿಯುತ್ತಾರೆ. ನಾನು ಯಲ್ಲಾಪುರದಲ್ಲಿ ಪ್ರೌಢ ಶಿಕ್ಷಣ ಪೂರೈಸಿದ್ದೇನೆ. ಕೊಡ್ಲಗದ್ದೆಯಿಂದ ಯಲ್ಲಾಪುರಕ್ಕೆ 40 ಕಿ.ಮೀ ದೂರ ಎಂದರೆ ಸಾಕ್ಷಿ 30 ಕಿ.ಮೀ ದೂರ ಇದೆ ಎಂದು ನುಡಿಯುತ್ತಾರೆ. ನಾನು ಯಲ್ಲಾಪುರದಿಂದಲೇ ಪ್ರೌಢಶಾಲೆಗೆ ಹೋಗುತ್ತಿದ್ದೆ. ನನ್ನ ತಮ್ಮ ಶಾಲೆಗೆ ಹೋಗುವ ಮುಂಚೆ ಅಡಿಕೆ ಹೆಕ್ಕಿ ಶಾಲೆಗೆ ಹೋಗುತ್ತಿದ್ದರೆ ಎಂದರೆ ಸಾಕ್ಷಿ ನನ್ನ ತಾಯಿ ಮಾಡುತ್ತಿದ್ದರು ಹಾಗೂ ಸ್ವಲ್ಪ ದೊಡ್ಡವನಾದ ನಂತರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟಿ ಸವಾಲು** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.